ಶ್ರೀ ಎಲ್. ಶ್ರೀಕಂಠಯ್ಯ.—ಹರಿಜನ ಗಿರಿಜನರು ಎಷ್ಟು ಹಿಂದುಳಿದಿದ್ದಾರೋ ಅಷ್ಟೇಮಟ್ಟಿಗೆ ಇತರ ಹಿಂದೂಗಳು, ಮುಸಲ್ಮಾನರು ಹಿಂದೆ ಉಳಿದಿದ್ದಾರೆ ಮತ್ತು ಹೀನ ಸ್ಥಿತಿಯಲ್ಲಿ ಇದ್ದಾರೆ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಬಿ. ಎಂ. ಪಾಟೀಲ್.—ಹರಿಜನರು ಗಿರಿಜನರು ಅಷ್ಟೇ ಅಲ್ಲ ಸಮಾಜದಲ್ಲಿ ಬಡವರು ಮತ್ತು ಇತರರು ಹಿಂದುಳಿದಿರುವವರು ಇದ್ದಾರೆ. ಈ ಸಂಬಂಧದಲ್ಲಿ ಸರ್ಕಾರ ಏನೂ ನಿರ್ಧಾರ ತೆಗೆದುಕೊಂಡಿಲ್ಲ.

ADDITIONAL ACCOMMODATION TO GOVERNMENT HIGH SCHOOL AT HALLIMYSORE.

679. SRI H. D. DEVE GOWDA (Holenarasipur).—Will the Minister for Education be pleased to state:—

(*a*) whether an estimate for the construction of four additional rooms to the Government High School at Hallimysore, Holenarasipur Taluk was submitted by P. W. D. to Government for necessary sanction about three years back;

(*b*) whether it has come to the notice of the Government that the present buildling is not sufficient to accommodate the present strength of students;

(*c*) whether the Government has any proposal before it to sanction the estimate at least during this year ?

SRI N. M. KOTRABASAIAH SOGI (Deputy Minister for Education). —

(*a*) No.

(*b*) No.

(*c*) No.

ಶ್ರೀ ಹೆಚ್. ಡಿ. ದೇವೇಗೌಡ.—ಬಿ. ಪ್ರಶ್ನೆಗೆ ಉತ್ತರವಾಗಿ ನೋ ಎಂದು ಹೇಳಿದ್ದೀರಿ. ನಿಮಗೆ ಯಾವ ತರಹ ಮನವಿಗಳನ್ನು ಮಾಡಿದರೆ ನಿಮ್ಮ ಗಮನಕ್ಕೆ ಬರುತ್ತದೆ ಎಂದು ತಿಳಿಸುತ್ತೀರಾ ?

†ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ:—ಇತ್ತೀಚೆಗೆ ಮಾನ್ಯ ಸದಸ್ಯರು ಮಂತ್ರಿಗಳ ಗಮನಕ್ಕೆ ತಂದಿದ್ದಾರೆ, ಅದರ ಬಗ್ಗೆ ಪ್ಲಾನ್ಸ್ ಅಂಡ್ ಎಸ್ಟಿಮೇಟ್ಸ್ ತರಿಸಿಕೊಳ್ಳಲಿಕ್ಕೆ ಪ್ರಯತ್ನ ನಡೆದಿದೆ. ಪ್ಲಾನ್ಸ್ ಅಂಡ್ ಎಸ್ಟಿಮೇಟ್ಸ್ ಬಂದಕೂಡಲೇ ಹಣಕಾಸಿನ ಪರಿಸ್ಥಿತಿ ನೋಡಿಕೊಂಡು ಕಾಯಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಹೆಚ್. ಡಿ. ದೇವೆಗೌಡ.—ಸರ್ಕಾರದಲ್ಲಿ ಹಣಕಾಸಿನ ಪರಿಸ್ಥಿತಿ ಹೇಗಿದೆ ಎನ್ನುವುದು ಗೊತ್ತಿದೆ. ೨೯೦ ಹುಡುಗರು ಶಾಲೆಯಲ್ಲಿ ಇದ್ದಾರೆ. ಇದು ಗೌವರ್ನಮೆಂಟ್ ಹೈಸ್ಕೂಲು ಬಹಳ ವರ್ಷದಿಂದ ಇದಕ್ಕೆ ಹಣವನ್ನು ಒದಗಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಪ್ಲಾನ್ಸ್ ಅಂಡ್ ಎಸ್ಟಿಮೇಟ್ ಬಾದ ಕೂಡಲೇ ಸಹಾನುಭೂತಿಯಿಂದ ಪರಿಶೀಲನೆ ಮಾಡುತ್ತೇವೆ.